ಸಮುದ್ರ
ಮಥನ




## ಸಕಾಲಿಕ ಲೇಖನ

'ಓದುವ ಮಕ್ಕಳಲ್ಲೇಕೆ ಈ ಟೆನ್ಷನ್?' ಡಾ. ಕೆ.ಎಸ್. ಪವಿತ್ರ ಅವರ ಮುಖಪುಟ ಲೇಖನ (ಸುಧಾ, 8 ಫೆಬ್ರುವರಿ) ಸಕಾಲಿಕವಾಗಿದೆ. ಪೋಷಕರು ಹಾಗೂ ಶಿಕ್ಷಕರಿಂದ ಓದುವ ಮಕ್ಕಳು ಒತ್ತಡಕ್ಕೊಳಗಾಗುತ್ತಿರುವುದು ಸತ್ಯ. ಒಂದೇ ಮಗು ಎಲ್ಲಾ ವಿಷಯಗಳ ಪಾಠ, ಕ್ರೀಡೆ, ಸಂಗೀತ, ನೃತ್ಯದಲ್ಲಿ ಮುಂದು ವರಿಯಬೇಕೆಂಬುದು ಈಗಿನ ಪೋಷಕರದ್ದಾಗಿದೆ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಎಚ್.ಸಿದ್ಧಾರ್ಥ ಹೆಬ್ಬಾರ್ ಈದು (ಕಾರ್ಕಳ), ಮಧುರ ಸುಬ್ರಹ್ಮಣ್ಯ ಬೆಂಗಳೂರು, ಪ್ರಕಾಶ್ ಕೆ. ಚಿಕ್ಕಮಗಳೂರು

## ಪೋಷಕರೇ ಎಚ್ಚರ

'ಓದುವ ಮಕ್ಕಳಲ್ಲೇಕೆ ಈ ಟೆನ್ಷನ್?' ಉತ್ತರ ಲೇಖನದಲ್ಲೇ ಇದೆ. ವಯಸ್ಸಿಗೆ ಮೀರಿದ ವಿಷಯಗಳನ್ನು ಎಳೆಯ ವಿದ್ಯಾರ್ಥಿಗಳ ಮನದಲ್ಲಿ ತುಂಬುವುದು. ಪುಟ್ಟ ವಯಸ್ಸಿಗೆ ತಮ್ಮ ಮಗ (ಳು) ಐ.ಎ.ಎಸ್. ಅಧಿಕಾರಿಯಂತಾಗಬೇಕು ಅಂತ ಈಗಲೇ ಅಧಿಕ ಒತ್ತಡ ಹೇರಿದರೆ ಅದ್ಯಾವ ವಿದ್ಯಾರ್ಥಿ ತಾನೇ ಟೆನ್ಷನ್ ಇಲ್ಲದೆ ಇರಬಲ್ಲ? ಮುಖ್ಯವಾಗಿ ಪೋಷಕರು ಈ ವಿಷಯದಲ್ಲಿ ಎಚ್ಚರ ವಹಿಸಬೇಕು.

—ಬೆಳ್ಳಾವೆ ರಮೇಶ್, ಬೆಂಗಳೂರು

## ಮಕ್ಕಳಿಗೆ ಒತ್ತಡ ಬೇಡ

ಸ್ಪರ್ಧಾತ್ಮಕ ಪರೀಕ್ಷೆಗಳೂ.. ತರಬೇತಿ ಕೇಂದ್ರಗಳೂ.. (ಲಾವಣ್ಣ ಗೌರಿ ವೆಂಕಟೇಶ್) ಶಿಕ್ಷಣ ಲೇಖನ ಚೆನ್ನಾಗಿದೆ. ವಿದ್ಯಾರ್ಥಿಗಳನ್ನು ತಯಾರು ಮಾಡುವ ಕೇಂದ್ರಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿವೆ. ಇದು ಅತಿರೇಕದ ಪರಮಾವಧಿಯೂ ಹೌದು. ಎಷ್ಟೇ ತಲೆಯಲ್ಲಿ ತುಂಬಿದರೂ ಅವರವರ ಬುದ್ಧಿ ಮತ್ತೆಯ ಅರಿವು, ಗ್ರಹಣಾ ಶಕ್ತಿಯನ್ನು ಅವಲಂಬಿಸಿವೆ. ಒಂದು ಲೀಟರ್ ಹಾಲು ಹಿಡಿಯುವ ಪಾತ್ರೆಗೆ ಮೂರು ಲೀಟರ್ ಹಾಲು ತುಂಬಲು ಸಾಧ್ಯವೆ? ಹೆತ್ತವರು ಇದನ್ನು ಚಿಂತಿಸಿ, ಮಕ್ಕಳಿಗೆ ಒತ್ತಡ, ಮಕ್ಕಳ ಸ್ಥಿತಿ ಅಯೋಮಯವಾಗದಂತೆ ಎಚ್ಚರಿಕೆ ವಹಿಸಬೇಕಾದ ಅಗತ್ಯ ಇದೆ.

—ಲಲಿತಾ ಅಂಬಾಗಿಲು, ಉಪ್ಪುಂದ

## ಕಾನೂನಿನ ಪಾಲನೆ ಮುಖ್ಯ

'ನಿಮ್ಮೊಡನೆ'ಯಲ್ಲಿ 'ಕಟ್ಟುನಿಟ್ಟಿನ ಹೆಲ್ಮೆಟ್ ದ್ವಿಚಕ್ರ ನಿಯಮ' (ಬಿ.ಎಂ. ಹನೀಫ್) ಬರಹದಲ್ಲಿ ವಾಹನ ಸವಾರರಿಗೆ ಕಡ್ಡಾಯ ಏಕೆ ಎಂಬುದನ್ನು ಅರ್ಥಪೂರ್ಣವಾಗಿ ತಿಳಿಸಿದ್ದಾರೆ. ಸರ್ಕಾರ ಕೇವಲ ಕಾನೂನು ಮಾಡಿದರೆ ಸಾಲದು, ಅದು ಎಷ್ಟರಮಟ್ಟಿಗೆ ತಾನು ಮಾಡಿದ ನಿಯಮ ಪಾಲನೆ ಆಗುತ್ತಿದೆ ಎಂಬುದನ್ನು ಗಮನಿಸಬೇಕು.

—ಮೇ.ಗೋ. ಸುಬ್ಬಣ್ಣ ಮೇಗರಹಳ್ಳಿ, ಗಾಣಧಾಳು ರಾಮಣ್ಣ ಚಿತ್ರದುರ್ಗ, ಶ್ರೀನಾಥ್ ಕೊನೇಟಿ ಬೆಂಗಳೂರು

## ವಿಚಾರಲಹರಿ

'ವಿಚಾರ ಲಹರಿ'ಯಲ್ಲಿ 'ನವ ನವ್ಯ' (ತೋಷ) ಬರಹ ನವ್ಯತೆಯ ಸೊಗಸಿನ ಚಿತ್ತಾರ ಬಿಡಿಸಿದೆ.

—ಎಚ್. ಆನಂದಕುಮಾರ್ ಚಿತ್ರದುರ್ಗ, ಕೊಹಿಮ ಬಸರಕೋಡು

## ಶ್ರಮ ಸಾರ್ಥಕ

ಬದುಕು ಅಂಕಣದ 'ಚಿಕ್ಕೋಡಿಯ ಕಹಳೆ ಕುಟುಂಬ' (ಸುಧಾಕರ ತಳವಾರು)ಚಿತ್ರ ಲೇಖನ ಆಕರ್ಷಕ. ಚಿಕ್ಕೋಡಿ ಪಟ್ಟಣದಲ್ಲಿ ಕಲೆಗಾರರಾದ ರಿಯಾಜ್ ತಯಾರಿಸುವ ಜಾನಪದ ವಾದ್ಯವೆಂದೇ ಪ್ರಸಿದ್ಧವಾದ ಕಹಳೆಗಳ ಬಗ್ಗೆ ಮಾಹಿತಿ ಇದೆ. ಇಂದಿನ ಆಧುನಿಕ ಯಾಂತ್ರಿಕ ಯುಗದಲ್ಲೂ, ಎಲ್ಲ ರಂಗದಲ್ಲೂ ಯಂತ್ರಗಳು ಸ್ಥಾನ ಪಡೆದಿರುವ ಕಾಲದಲ್ಲಿಯೂ, ಕೇವಲ ಕೈಯಿಂದಲೇ ಹಿತ್ತಾಳೆ ತಗಡುಗಳನ್ನು ಮಣಿಸಿ, ತಗ್ಗಿಸಿ ಅತ್ಯಾಕರ್ಷಕವಾದ ಕಹಳೆಗಳನ್ನು ತಯಾರಿಸುವ ಇವರ ಶ್ರಮ ಸಾರ್ಥಕ.

—ಕೆ.ಪಿ. ರಾಮಗುಂಡಿ ಬೈಲಹೊಂಗಲ, ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ, ಪಿ.ಜಯವಂತ ಪೈ ಕುಂದಾಪುರ, ನಾಗರತ್ನ ಮಂಜುನಾಥ್ ರಾಚೇನಹಳ್ಳಿ , ರವೀಂದ್ರನಾಥ ಶಿ ಯಡಹಳ್ಳಿ

## ಕಣ್ಣು ತೆರೆಸುವಂತಿದೆ

ಆರೋಗ್ಯ ಲೇಖನ 'ಕ್ಯಾನ್ಸರ್; ಮುನ್ನೆಚ್ಚರಿಕೆ ಅಗತ್ಯ' (ಡಾ.ಗುರಲಿಂಗಪ್ಪ ಅಂಕದ) ಲೇಖನ ಕಣ್ಣು ತೆರೆಸುವಂತಿದೆ. ಇಂದಿನ ಜೀವನಶೈಲಿಯೇ ಇದಕ್ಕೆ ಬಹು ಮುಖ್ಯ ಕಾರಣವಾದರೂ ಭೂಮಿ ಬಿಸಿಯೇರುವಿಕೆಯು ಇದಕ್ಕೆ ಪರೋಕ್ಷ ಕಾರಣವಾಗಿದೆ ಎಂಬುದು 'ಶೈತ್ಯೋಷ್ಣ ಸಿದ್ಧಾಂತ' (Cryothermo theory) ಸಾಧಾರ ಗಳೊಂದಿಗೆ ತೋರಿಸಿದೆ.

—ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

## ಕಥೆ ಚೆನ್ನಾಗಿದೆ

'ಒಡಲ ಬೆಂಕಿ' (ಸಿರಿಮೂರ್ತಿ ಕಾಸರವಳ್ಳಿ) ಕಥೆ ಚೆನ್ನಾಗಿದೆ. ಮಾಡಿದ ತಪ್ಪು ಮನಸ್ಸಿನಲ್ಲಿ ಉಳಿದು ಪರಿತಪಿಸುವಿಕೆಯ ವಿವರಣೆ ಮನೋಜ್ಞವಾಗಿದೆ.

—ಎಸ್. ವಿಜಯಕುಮಾರಿ, ಬೆಂಗಳೂರು, ಆರ್.ಮಣಿ ಹಾಡ್ಯ ಮೈಸೂರು

## ಗೊಂದಲಮಯ

'ಹುಲಿ; ಮುಗಿದ ಗಣತಿ' (ಆರ್.ಕೆ.ಮಧು) ಲೇಖನ ಮಾಹಿತಿ ಪೂರ್ಣವಾಗಿದ್ದರೂ ಶೀರ್ಷಿಕೆಯಲ್ಲೇ ಇರುವಂತೆ, ಫಲಿತಾಂಶ ಗೊಂದಲಮಯವಾದಂತಿದೆ. ಮುಖ್ಯವಾಗಿ ಕಾಡುಗಳನ್ನು ಹೆಚ್ಚಿಸುವುದನ್ನು ಬಿಟ್ಟು, ಗಣತಿಯನ್ನೇ ಮಾಡುತ್ತಿದ್ದರೆ, ಮುಂದೊಂದು ದಿನ ಹುಲಿ ಅಳಿದ ಜೀವಿಗಳ ಗುಂಪಿಗೆ ಸೇರುವುದು ಖಚಿತ.

—ಬಾಳ್ಳುಪೇಟೆ ನೀಲಕಂಠಪ್ಪ ಹಾಸನ

## ಖೇದ ಉಂಟಾಯಿತು

ಹುಲಿಯ ಮೇಲೆ ಲೇಖನ ಓದಿ, ಹುಲಿಗಳ ಸಂಖ್ಯೆ ಕಡಿಮೆ ಆಗುತ್ತಿರುವ ವಿಷಯ ತಿಳಿದು ಖೇದ ಉಂಟಾಯಿತು.

—ಅನಿಲ್‌ಕುಮಾರ್ ವಾಳುಜಕರ, ಮುಂಬಯಿ

## ದಾಡಿ ಪುರಾಣ

ಫ್ಯಾಷನ್ ಪುಟದಲ್ಲಿ 'ದಾಡಿ ಪುರಾಣ' (ಪ.ನಾ.ಹಳ್ಳಿ ಹರೀಶ್‌ಕುಮಾರ್) ಲೇಖನ ಚೆನ್ನಾಗಿದೆ. ನಾವು ಬೆಳೆಸಿದ ಗಡ್ಡ ನಾವೊಬ್ಬ ಸಮರ್ಥ ವ್ಯಕ್ತಿಯಾಗಿ ಕಂಡುಬರುವಂತೆ ಮಾಡುತ್ತದೆ.

—ನಾರಾಯಣ ಯಾಜಿ ಶಿರಾಲಿ

## ಕೊಡಚಾದ್ರಿ ಜೀಪ್

'ಕೊಡಚಾದ್ರಿ ಚಾಲಕರು' ಪ್ರವಾಸ ಪುಟ ಲೇಖನ (ಸಂತೋಷ್ ರಾವ್ ಪೆರ್ಮುಡ) ಪ್ರವಾಸಿಗರಿಗೆ ಉಪಯುಕ್ತ. ಶಿಖರ ಹತ್ತಿಳಿಯುವ ಜೀಪ್ ಚಾಲಕರ ರೋಚಕಮಯ ಬದುಕಿನ ವಿವರ ಲೇಖನದಲ್ಲಿ ದಾಖಲಾಗಿದೆ. ಅದ್ಭುತವಾದ ತಿರುವುಗಳು, ಏರು ಮುಖ, ಸ್ವಲ್ಪವು ವ್ಯತ್ಯಾಸವಾದರೂ ಪಾತಾಳ ಕಾಣ ಬಹುದಾದ ಸನ್ನಿವೇಶವನ್ನು ನೆನಪಿಸಿಕೊಂಡರೆ ಮೈ ಜುಂ ಎನ್ನುತ್ತದೆ. ಆದರೆ ಆ ಕಾಯಕದಲ್ಲಿಯೇ ನಿರಾತಂಕವಾಗಿ ದುಡಿಯುವ ಚಾಲಕರು ಕೊಡಚಾದ್ರಿ ಆಸ್ತಿ.

—ಕೋಟೇಶ್ವರ ಸೂರ್ಯನಾರಾಯಣ ರಾವ್ ಬೆಂಗಳೂರು

## ಸುಂದರ ಕವಿತೆ

'ಎಳೆಯರ ಅಂಗಳ'ದಲ್ಲಿ ಅಮೃತೇಶ ತಂಡರ ಅವರ 'ಜ್ಞಾನಪೀಠ ಸಾಮ್ರಾಟರು' ಕವಿತೆ ಕನ್ನಡ ಸಾಹಿತ್ಯಕ್ಕಾಗಿ ಪ್ರಶಸ್ತಿ ಪಡೆದ ಸಾಹಿತಿಗಳನ್ನು ಸುಲಭವಾಗಿ ನೆನಪಿಡಲು ಅನುಕೂಲವಾಗಿದೆ. ಪ್ರಶಸ್ತಿ ಪಡೆದ ಕವಿಗಳ ಹೆಸರು ಶಿಸ್ತುಬದ್ಧವಾಗಿರುವುದು ಕವನದ ವಿಶೇಷ.

—ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

## ಲೇಖನದಲ್ಲೇ ಉತ್ತರ

'ವೈದ್ಯರೇಕೆ ಪದೇ ಪದೇ ಮುಷ್ಕರ ಹೂಡುತ್ತಾರೆ?' (ಡಾ.ಅರುಣಾ ಯಡಿಯಾಳ್) ಲೇಖನದಲ್ಲೇ ಉತ್ತರ ಇದೆ. ರೋಗಿ ಹಾಗೂ ಸಂಬಂಧಿಕರ ಪಾಲಿಗೆ ಜೀವ ಉಳಿಸುವ ವೈದ್ಯರು ನಿಜಕ್ಕೂ ದೇವರ ಸಮಾನ. ಇಡೀ ವ್ಯವಸ್ಥೆಯೇ ಭ್ರಷ್ಟಾಚಾರದ ಕೂಪವಾಗಿರುವಾಗ ವೈದ್ಯರು ಮುಷ್ಕರ ಹೂಡುವುದು ತಪ್ಪು ಎಂದು ಹೇಳಲಾದೀತೆ?

—ರಾಜಶೇಖರ ಹಾದಿಮನಿ ಧಾರವಾಡ, ರುಕ್ಮಿಣಿ ಕೃ.ದೇಶಪಾಂಡೆ ಗೋಕಾಕ, ಡಾ.ಪಿ.ಜಿ.ಕಲ್ಲಾಪುರೆ ಧಾರವಾಡ

## ನಿಜಕ್ಕೂ ಅಚ್ಚರಿ

ವಂಡರ್ ಪುಟದಲ್ಲಿ 'ಚೀನಾ ದೇಶದ ಅತಿ ಉದ್ದದ ಗಾಜಿನ ಸೇತುವೆ' (ಸುಭಾಸ ಯಾದವಾಡ) ನಿಜಕ್ಕೂ ವಂಡರ್! ಬರಹ ಓದಿದ ಮೇಲೆ ಗಾಜಿನ ಸೇತುವೆ ಮೇಲೆ ನಡೆದಾಡಬೇಕು ಎಂಬ ಆಸೆ ಆಗಿದೆ.

—ಬಿ.ಎಸ್. ರಮೇಶ್, ಬೆಂಗಳೂರು

## ಸೆಲೆಬ್ರಿಟಿ

'ಸೆಲೆಬ್ರಿಟಿ' ಅಂಕಣದಲ್ಲಿ 'ನಿಷ್ಠುರ ವ್ಯಕ್ತಿತ್ವದ ರಾಜನ್' (ಹನಿ) ಬರಹ ಚೆನ್ನಾಗಿದೆ.

—ಸುಂದರ್, ಬೆಂಗಳೂರು